**<u>ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 101/2018**

| | | | |
|---|---|---|---|
| **ಹೆಸರು** | **:** | **ಬಸವರಾಜ** | **ದೋ.ಸಾ. 7** |
| **ತಂದೆಯ ಹೆಸರು** | **:** | **ವೀರಶೆಟ್ಟಿ** | **ಪ್ರಾ.ಸಾ. 8** |
| **ವಯಸ್ಸು** | **:** | **66 ವರ್ಷ** | **ದಿನಾಂಕಃ 17-03-2022** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ರಾಯಕೋಡ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1, 3 ರಿಂದ 6, 8 ರಿಂದ 15 ನನಗೆ ಗೊತ್ತು. ಸದರಿಯವರು ನಮ್ಮ ಊರಿನವರು.

1 ಮತ್ತು 2 ನೇ ಆರೋಪಿತರು ಗೊತ್ತು. ಇತರೆ ಆರೋಪಿತರು ಗೊತ್ತಿಲ್ಲ.

ಚಾಸಾ-1 ರವರನ್ನು 1 ನೇ ಆರೋಪಿಗೆ ಕೊಟ್ಟು 2016 ರಲ್ಲಿ ಮದುವೆ ಮಾಡಲಾಗಿತ್ತು. ಮದುವೆ ಸಂದರ್ಭದಲ್ಲಿ 2 ಲಕ್ಷ ರೂಪಾಯಿ ಹಣ ಮತ್ತು 6 ತೊಲೆ ಬಂಗಾರ ಕೊಡಲಾಗಿತ್ತು. ಮದುವೆಯಾದ 6 ತಿಂಗಳ ನಂತರ ಚಾಸಾ-1 ಮತ್ತು 1 ನೇ ಆರೋಪಿಯ ನಡುವೆ ಜಗಳವಾಗಿ ಚಾಸಾ-1 ವಾಪಾಸು ಮನೆಗೆ ಬಂದು ಸೇಡಂನಲ್ಲಿ ನೌಕರಿ ಮಾಡಿಕೊಂಡು ಅಲ್ಲಿಯೇ ವಾಸವಿರುತ್ತಾಳೆ.

ಮೇಲ್ಕಂಡ ವಿಚಾರಗಳನ್ನು ಹೊರತುಪಡಿಸಿ ನನಗೆ ಬೇರೆ ವಿಷಯ ಗೊತ್ತಿಲ್ಲ. ಪೋಲೀಸರ ಮುಂದೆ ಮದುವೆಯ ಸಂದರ್ಭದಲ್ಲಿ 1 ನೇ ಆರೋಪಿಗೆ 2 ಲಕ್ಷ ಹಣ ಮತ್ತು 6 ತೊಲೆ ಬಂಗಾರ ಕೊಡಲಾಗಿದೆ ಎಂದು ಹೇಳಿಕೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಮದುವೆಗೂ ಮೊದಲು ಆರೋಪಿತರೆಲ್ಲರೂ ಚಾಸಾ-1 ರವರನ್ನು ನೋಡಲು ನಮ್ಮ ಊರಿಗೆ

ಬಂದಿದ್ದರು ಎನ್ನುವುದು ಸರಿ. ಆಗ ನಾನು ಮತ್ತು ನಮ್ಮ ಊರಿನ ಇತರರು ಹಾಜರಿದ್ದು, 1 ನೇ ಆರೋಪಿ ಮತ್ತು ಚಾಸಾ-1 ರವರ ನಡುವೆ ಮದುವೆ ನಿಶ್ಚಯ ಮಾಡಿದ್ದೇವೆ ಎನ್ನುವುದು ಸರಿ. ದಿನಾಂಕ 10-7-2016 ರಂದು ಚಾಸಾ-1 ರವರ ಮದುವೆ 1 ನೇ ಆರೋಪಿಯೊಂದಿಗೆ ಶಿವಲಿಂಗೇಶ್ವರ ಕಟ್ಟಿಮಠ ರಾಯಕೋಡದಲ್ಲಿ ನಡೆದಿತ್ತು ಎನ್ನುವುದು ಸರಿ. ಸದರಿ ಮದುವೆಗೆ ನಾನು ಮತ್ತು ನಮ್ಮ ಊರಿನ ಇತರರು ಹೋಗಿದ್ದೆವು ಎನ್ನುವುದು ಸರಿ. ಮದುವೆಯ ಸಂದರ್ಭಗಳಲ್ಲಿ 1 ನೇ ಆರೋಪಿಗೆ ಗೃಹ ಬಳಕೆಯ ವಸ್ತುಗಳನ್ನು ಕೊಡಲಾಗಿತ್ತು ಎನ್ನುವುದು ಸರಿ.

ಮದುವೆಯಾದ 1 ತಿಂಗಳ ನಂತರ ಚಾಸಾ-12 ರವರು ನನಗೆ ಆರೋಪಿತರು ಮನೆ ಕಟ್ಟಿಸುವ ಸಲುವಾಗಿ ಚಾಸಾ-1 ರವರಿಗೆ ಮತ್ತಷ್ಟು ವರದಕ್ಷಿಣೆ ಹಣ ತರುವಂತೆ ಕೇಳಿದ್ದಾರೆಂದು ತಿಳಿಸಿದ್ದರು ಎನ್ನುವುದು ಸರಿ. ಈ ವಿಚಾರವಾಗಿ ಚಾಸಾ-1 ರವರಿಗೆ ಆರೋಪಿತರು ಮಾನಸಿಕ ಕಿರುಕುಳ ಕೊಟ್ಟಿದ್ದಾರೆಂದು ಚಾಸಾ-12 ರವರು ನನಗೆ ಹೇಳಿದ ಎಂದರೆ ಸರಿ. ದಿನಾಂಕ 25-4-17 ರಂದು ನಾನು, ಚಾಸಾ-8, 9 ರವರು ಆರೋಪಿತರ ಮನೆಗೆ ಚಾಸಾ-12 ರವರೊಂದಿಗೆ ಹೋಗಿ ಆರೋಪಿತರಿಗೆ ಹೆಚ್ಚಿನ ವರದಕ್ಷಿಣೆ ಕೇಳಿ ಕಿರುಕುಳ ಕೊಡುವುದು ಸರಿಯಲ್ಲ ಎಂದು ಬುದ್ಧಿವಾದ ಹೇಳಿ ಬಂದೆವು ಎಂದರೆ ಸರಿ.

ಆದರೂ ಸಹ ಆರೋಪಿತರು ಚಾಸಾ-1 ರವರಿಗೆ ತವರು ಮನೆಯಿಂದ 5 ತೊಲೆ ಬಂಗಾರ ಮತ್ತು 2 ಲಕ್ಷ ಹಣ ತೆಗೆದುಕೊಂಡು ಬಾ ಎಂದು ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳ ಕೊಟ್ಟಿದ್ದರಿಂದ ದಿನಾಂಕ 11-10-2017 ರಂದು ರಾತ್ರಿ 10 ಗಂಟೆ ಸುಮಾರಿಗೆ ತನ್ನ ಗಂಡನ ಮನೆಯಲ್ಲಿ ಓಢ್ನಿಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಪಟ್ಟಿದ್ದಳು ಎನ್ನುವುದು ಸರಿ. ಆಗ ಅಕ್ಕಪಕ್ಕದ ಮನೆಯವರು ಚಾಸಾ-1 ರವರನ್ನು ಕಾಪಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

ಮೇಲ್ಕಂಡ ಎಲ್ಲಾ ವಿಚಾರಗಳನ್ನು ದಿನಾಂಕ 14-10-2017 ರಂದು ನಾನು ಪೋಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೇನೆ ಎನ್ನುವುದು ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಬಿ.ಕೆ. ವಕೀಲರಿಂದಃ</u>**

ದಿನಾಂಕ 25-4-2017 ರಂದು ನಾನು, ಚಾಸಾ-8, 9 ಮತ್ತು 12 ರವರು ಆರೋಪಿತರ ಮನೆಗೆ ಹೋಗಿ ರಾಜೀ ಪಂಚಾಯತಿ ಮಾಡಿ ಅವರಿಗೆ ಬುದ್ದಿಮಾತು ಹೇಳಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮದುವೆಯ ಕಾಲಕ್ಕೆ 1 ನೇ ಆರೋಪಿಗೆ 2 ಲಕ್ಷ ಹಣ ಮತ್ತು 6 ತೊಲೆ ಬಂಗಾರ ಕೊಡಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮದುವೆಯ ಕಾಲಕ್ಕೆ 1 ನೇ ಆರೋಪಿಗೆ 2 ಲಕ್ಷ ಹಣ ಮತ್ತು 6 ತೊಲೆ ಬಂಗಾರ ಕೊಟ್ಟ ಬಗ್ಗೆ ಯಾವುದೇ ದಾಖಲೆ ಬರೆದುಕೊಂಡಿಲ್ಲ. ಪಂಚಾಯತಿ ಕಾಲಕ್ಕೆ ಊರಿನ ಜನರು ಯಾರೂ ಇರಲಿಲ್ಲ.

2 ನೇ ಆರೋಪಿ ವೃದ್ಧೆ ಎನ್ನುವುದು ಸರಿ. 2 ನೇ ಆರೋಪಿಯನ್ನು ನೋಡಿಕೊಳ್ಳುವಂತೆ 1 ನೇ ಆರೋಪಿ ಹೇಳಿದ್ದಕ್ಕೆ ಚಾಸಾ-1 ಸುಳ್ಳು ಕೇಸು ದಾಖಲು ಮಾಡಿದ್ದಾಳೆ ಎನ್ನುವುದು ಸರಿಯಲ್ಲ. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಈ ಪ್ರಕರಣದ ಸಂಬಂಧ ನಾನು ಸುಲೇಪೇಟೆ ಪೋಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ. ಪೋಲೀಸರು ನಮ್ಮ ಊರಿಗೆ ಬಂದು ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿ. ಈ ಪ್ರಕರಣದ ಸಂಬಂಧ ನನಗೇನೂ ಗೊತ್ತಿಲ್ಲದಿದ್ದರೂ ಸಹ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳಲು ಬಂದಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಅಪರ ಪ್ರ.ದ.ನ್ಯಾ.ದಂ. ಚಿಂಚೋಳಿ**